ಓ ಎಸ್ ನಂ. **559/2022**
ಪಿಡಬ್ಲ್ಯೂ.**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **01.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ **5** ರಿಂದ **7** ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್ ಎಂ ವಕೀಲರಿಂದಃ–

ನನಗೆ **5** ರಿಂದ **7** ನೇ ಪ್ರತಿವಾದಿಯರು ಚಿಕ್ಕಪ್ಪ, ಚಿಕ್ಕಮ್ಮ ಮತ್ತು ಅತ್ತೆಯಾಗಬೇಕು. ನನ್ನ ತಂದೆ, ಗೋವಿಂದರಾಜು ಮತ್ತು **5** ರಿಂದ **7** ನೇ ಪ್ರತಿವಾದಿಯರು ನಾರಾಯಣಪ್ಪನ ಮಕ್ಕಳು ಎಂದರೆ ಸರಿ. ನಾರಾಯಣಪ್ಪನ ಎಲ್ಲಾ ಆಸ್ತಿಗಳಲ್ಲಿ ಅವರ ಮಕ್ಕಳಿಗೆ ಸಮಾನವಾದ ಹಿಸ್ಸೆ ಇದೆ ಎಂದರೆ ಸರಿ. ದಾವಾ ಆಸ್ತಿಗಳು ವಾದಿ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಒಟ್ಟು ಕುಟುಂಬದ ಎಲ್ಲಾ ವ್ಯವಹಾರಗಳನ್ನು ಗೋವಿಂದರಾಜುರವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂ **3** ರ ಆಸ್ತಿಯನ್ನು ಗೋವಿಂದರಾಜು ರವರು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಅಭಿವೃದ್ದಿ ಪಡಿಸಲು ಹಾಗೂ ಕೃಷಿ ಚಟುವಟಿಕೆಗಳನ್ನು ನಡೆಸಲು ಗೋವಿಂದರಾಜು, ನಾರಾಯಣಪ್ಪ, ವೆಂಕಟರಾಮಯ್ಯ ಮತ್ತು ಹನುಮಂತೇಗೌಡ ಸೇರಿ ಪಿ ಎಲ್ ಡಿ ಬ್ಯಾಂಕ್‌ಗೆ ಅಡಮಾನ ಮಾಡಿದ್ದರು ಎಂದರೆ ಸರಿ. ಅಡಮಾನ ಪತ್ರದ ದೃಡೀಕೃತ ಪತ್ರವನ್ನು ಸಾಕ್ಷಿ ನೋಡಿ ಒಪ್ಪಿಕೂಂಡಿದ್ದು ಅದನ್ನು **2** ರಿಂದ **4** ನೇ ಪ್ರತಿವಾದಿಯ ಪರ ವಕೀಲರ ತಕರಾರಿನೂಂದಿಗೆ ನಿಡಿ **1** ಎಂದು ಗುರುತಿಸಲಾಯಿತು. ಒಟ್ಟು ಮೂರು ಬಾರಿ ದಾವಾ ಆಸ್ತಿಗಳನ್ನು ಅಡಮಾನ ಮಾಡಿ ಒಟ್ಟು ಕುಟುಂಬದ ಆದಾಯದಿಂದ ಬಿಡಿಸಿಕೊಂಡಿದ್ದಾರೆ ಎಂದರೆ ಸರಿ. ಆದಾರ ತೀರುವಳಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **2** ರಿಂದ **4** ನೇ ಪ್ರತಿವಾದಿಯ ಪರ ವಕೀಲರ ತಕರಾರಿನೂಂದಿಗೆ ನಿಡಿ **2** ಎಂದು ಗುರುತಿಸಲಾಯಿತು. ಸದರಿ ಅಡಮಾನ ಮಾಡಿರುವ ಬಗ್ಗೆ ಇಸಿ ಯಲ್ಲಿ ನಮೂದು ಆಗಿದೆ ಎಂದರೆ ಸರಿ. ಸದರಿ ಇಸಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **2** ರಿಂದ **4** ನೇ ಪ್ರತಿವಾದಿಯ ಪರ ವಕೀಲರ

ಓ ಎಸ್ ನಂ. **559/2022**

ಪಿಡಬ್ಲ್ಯೂ.**1**

ತಕರಾರಿನೊಂದಿಗೆ ನಿಡಿ **3** ಎಂದು ಗುರುತಿಸಲಾಯಿತು. ದಾವಾ ಆಸ್ತಿಯಲ್ಲಿ ಇದುವರೆವಿಗೂ ಭಾಗ ಆಗದೇ ಇರುವ ಕಾರಣ ಎಲ್ಲಾ ಒಟ್ಟು ಕುಟುಂಬದ ಸದಸ್ಯರಿಗೂ ಭಾಗ ಇದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.